**ಪಾಠ-5** **ಅಕ್ಟೋಬರ್ 23-29**

# ನಿನ್ನ ದ್ವಾರದಲ್ಲಿರುವ ಅನ್ಯದೇಶದವರು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಮಾರ್ಕ 12:29–31, ಧರ್ಮೋಪದೇಶಕಾಂಡ 10:1–19, ಕೀರ್ತನೆ 146:5–10, ಮತ್ತಾಯ7:12, ಧರ್ಮೋಪದೇಶಕಾಂಡ 27:19, ಯಾಕೋಬ 1:27, ಯಾಕೋಬ 2:11.

**ಸ್ಮರಣ ವಾಕ್ಯ : "ಐಗುಪ್ತದೇಶದಲ್ಲಿ ನೀವೇ ಪರದೇಶಿಗಳಾಗಿದ್ದನ್ನು ಜ್ಞಾಪಿಸಿಕೊಂಡು ಪರದೇಶದವರಲ್ಲಿ ಪ್ರೀತಿ ಇಡಿರಿ"** (ಧರ್ಮೋಪದೇಶಕಾಂಡ 10:19).

ಕಳೆದ ವಾರ ನಾವು ಓದಿದ ಹಾಗೆ ಒಬ್ಬ ಶಾಸ್ತ್ರಿಯು ಕೇಳಿದನು "ಎಲ್ಲಾ ಆಜ್ಞೆಗ್ಗಳಲ್ಲಿ ಮೊದಲನೆಯದು ಯಾವುದು?" ಮಾರ್ಕ 12:28 ಯೇಸು ಉತ್ತರಿಸಿ ಖಂಡಿತವಾಗಿ ದೇವರು ಒಬ್ಬನೇ ಎಂದು ಹೀಗೆ ಹೇಳಿದನು "ನಮ್ಮ ದೇವರಾದ ಕರ್ತನು ಒಬ್ಬನೇ ದೇವರು ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ, ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುವುದೇ ಮೊದಲನೆಯ ಆಜ್ಞೆ" ಮಾರ್ಕ 12:30, ಹೇಗಿದ್ದರು ಯೇಸು ಮಾತನಾಡಲು ಮುಂದುವರೆದು ಎರಡನೆಯದು ಅದರಂತೆ ಮಾರ್ಕ 12:31 ಶಾಸ್ತ್ರಿಯು ಆ ವಿಶಯವನ್ನು ಕೇಳಲಿಲ್ಲ. ಆದಾಗ್ಯೂ ಯೇಸು ಅದು ಎಷ್ಟು ಪ್ರಾಮುಖ್ಯವೆಂದು ತಿಳಿದು "ನಿನ್ನ ನೆರೆಯವನನ್ನು ನಿನ್ನಂತೆ ಪ್ರೀತಿಸಬೇಕು ಎಂಬುದೇ ಎರಡನೇ ಆಜ್ಞೆ". ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದು ಇಲ್ಲ ಎಂದು ಉತ್ತರ ಕೊಟ್ಟನು (ಮಾರ್ಕ 12:31). ಈ ಆಜ್ಞೆಗಳಿಗಿಂತ ಶ್ರೇಷ್ಠವಾದದ್ದು ಮತ್ತ್ಯಾವುದೂ

* **ಈ ವಾರದ ಪಾಠವನ್ನು ಅಕ್ಟೋಬರ್ 30ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಇಲ್ಲವೋ? ಯೇಸು, ದೇವರಿಗೆ ಪ್ರೀತಿ ಮತ್ತು ನೆರೆಯವರಿಗೆ ಪ್ರೀತಿಯನ್ನು ಕೂಡಿಸಿ ಒಂದೇ ಆಜ್ಞೆಯಾಗಿ ಮಾಡಿ ಮತ್ತು ಆ ಆಜ್ಞೆಯು ಎಲ್ಲಾ ಆಜ್ಞೆಗಿಂತ ಶ್ರೇಷ್ಠವಾದದ್ದು ಎಂದನು.

ಮತ್ತೆ ಯೇಸು ಹೊಸ ವಿಷಯದ ಬಗ್ಗೆ ಏನನ್ನು ಹೇಳಲಿಲ್ಲ. ಯೆಹೂದ್ಯರು ಹಿಂದೆ ಕೇಳದೆ ಇದ್ದ ವಿಷಯವೂ ಅಲ್ಲ ಆತನನ್ನು ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸಲು ಕರೆಯುವಿಕೆ ಕೊಟ್ಟನು ಹಾಗೂ ಒಬ್ಬನು ನೆರೆಯವನನ್ನು ಪ್ರೀತಿಸುವ ದೇವರನ್ನು ಪ್ರೀತಿ ಮಾಡಿದ ಹಾಗೆ ವ್ಯಕ್ತವಾಗಿದೆ. ಈ ವಿಷಯವು ಧರ್ಮೋಪದೇಶಕಾಂಡ ಪುಸ್ತಕದಿಂದ ತೆಗೆಯಲ್ಪಟ್ಟದ್ದು.

**ಭಾನುವಾರ** **ಅಕ್ಟೋಬರ್ 24**

## ನಿಮ್ಮ ಹೃದಯದಲ್ಲಿ ಸುನ್ನತಿ

ಧರ್ಮೋಪದೇಶಕಾಂಡ 10ನೇ ಅಧ್ಯಾಯದಲ್ಲಿ 9ನೇ ಅಧ್ಯಾಯದ ಮುಂದುವರೆ–ವಿಕೆಯಾಗಿದೆ. ದೇವರು ಇಸ್ರಾಯೇಲ್ಯರ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ದೃಢೀಕರಿಸಿದ್ದು ಹೇಗೂ ಈ ಪುಸ್ತಕವು ಒಂದು ತರವಾದ ಒಡಂಬಡಿಕೆಯ ನವೀಕರಣ. ಹೋರೆಬ್ ಬೆಟ್ಟದ ಬಳಿಯಲ್ಲಿ ಅವರು ಘೋರವಾದ ಪಾಪ ಮಾಡಿದಾಗಲೂ, ಮೋಶೆಯು ಸ್ವಲ್ಪ ಕಾಲ ಅವರನ್ನು ಅಗಲಿದ ಕೂಡಲೇ ವಿಗ್ರಹಾರಾಧನೆಗೆ ಒಳಗಾದಾಗ್ಯೂ ಕರ್ತನು ಅವರನ್ನು ಕೈ ಬಿಡಲಿಲ್ಲ.

ಧರ್ಮೋಪದೇಶಕಾಂಡ 10:1–11 ಓದಿ. ಈ ವಚನದಲ್ಲಿ ಕಾಣುವ ಹಾಗೆ ದೇವರು ತನ್ನ ಜನರಿಗೆ ಅವರ ಪಾಪಗಳನ್ನು ಕ್ಷಮಿಸಿ ಒಡಂಬಡಿಕೆಯ ವಾಗ್ದಾನವನ್ನು ದೃಢೀಕರಿಸಿ ಅವರಿಗೂ ಅವರ ಪಿತೃಗಳಿಗೂ ಮಾಡಿದ್ದನ್ನು ನಾವು ಹೇಗೆ ಅರ್ಥೈಸಿಕೊಳ್ಳಲು ಸಾಧ್ಯ?

ಮೋಶೆಯು ದಶಾಜ್ಞೆಗಳ ಶಿಲಾಶಾಸನಗಳನ್ನು ಹೊಡೆದು ಬಿಟ್ಟನು. ಧರ್ಮೋಪದೇಶಕಾಂಡ 9:17– ಅದು ಮುರಿದ ಒಡಂಬಡಿಕೆಯ ಸಾಂಕೇತ. ಧರ್ಮೋಪದೇಶಕಾಂಡ 32:19 "ಅವರು ಮಾಡಿದ ಅಪರಾಧಕ್ಕೆ ಹೇಸಿಕೆಯನ್ನು ತೋರಿಸಲು ಆತನು ಆ ಎರಡು ಶಿಲಾಶಾಸನವನ್ನು ಕೆಳಗೆ ಬಿಸಾಡಿ ಮತ್ತು ಅದು ಜನರ ಸಮ್ಮುಖದಲ್ಲಿಯೇ ಮುರಿದು ಹೋಯಿತು. ಇದರ ಸಾಂಕೇತ ಅವರು ದೇವರ ಒಡಂಬಡಿಕೆಯನ್ನು ಮುರಿದ ಪ್ರಯುಕ್ತವಾಗಿ ದೇವರು ಅವರ ಸಂಗಡ

ಒಡಂಬಡಿಕೆಯನ್ನು ಮುರಿದನು. ಎಲ್ಲೆನ್ ಜಿ ವೈಟ್ ಪೇಟ್ರಿಯಾರ್ಕ್ಸ್ ಅಂಡ್ ಪ್ರಾಫೆಟ್ಸ್ ಪುಟ 320. ಅದುದರಿಂದ ದೇವರು ಮೋಶೆಗೆ ಮತ್ತೆ 2 ಹೊಸ ಹಲಗೆಗಳನ್ನು (ಮೊದಲಿದ್ದ ಹಾಗೆ) ಕತ್ತರಿಸಿ ಅದರ ಮೇಲೆ ಮೊದಲಿದ್ದ ಪದಗಳನ್ನು ಬರೆದದ್ದರಿಂದ ಅದು ತೋರಿಸುವುದೇನೆಂದರೆ ದೇವರು ಆ ಜನರಿಗೆ ಕ್ಷಮಿಸಿ ಅವರನ್ನು ಬಿಟ್ಟು ಬಿಡಲಿಲ್ಲವೆಂದು ತೋರಿಸುತ್ತದೆ.

ಧರ್ಮೋಪದೇಶಕಾಂಡ 10:14–16 ಅದನ್ನು ಓದಿ. ದೇವರು ಅವರಿಗೆ ಹೇಳುವುದೇನು? ಕರ್ತನು ಇಲ್ಲಿ ಉಪಯೋಗಿಸುವ ಚಿತ್ರಗಳ ಅರ್ಥವೇನು?

ಇಲ್ಲಿ ಚಿತ್ರಗಳ ಮಿಶ್ರಣವಿದೆ : ಮುಂದೋಗಲು, ಹೃದಯ ಮತ್ತು ಕುತ್ತಿಗೆ ಹೇಗೋ ವಿಷಯವು ಸ್ಪಷ್ಟವಾಗಿದೆ. ಈ ಸುನ್ನತಿಯು ಒಡಂಬಡಿಕೆಯ ಸಾಂಕೇತವಾಗಿದೆ. ಆದರೆ ಅದು ಹೊರ ನೋಟದ ಚಿಹ್ನೆ ಮಾತ್ರ.

ದೇವರಿಗೆ ಬೇಕಾದದ್ದು ಅವರ ಹೃದಯ ಅಂದರೆ ಅವರ ಮನಸ್ಸು ಮತ್ತು ಅವರ ಪ್ರೀತಿ ಮತ್ತು ವಾತ್ಸಲ್ಯ. ಅವರ ಮೊಂಡುತನದ ಚಿತ್ರವು ತೋರಿಸುವು–ದೇನೆಂದರೆ ಅವರು ಎಷ್ಟು ಚೆಂಡಿಕೋರರು (ಬಗ್ಗದ ಜನರು) ಆಗಿದ್ದರು. ಅವರು ದೇವರಿಗೆ ವಿಧೇಯರಾಗಲು ಇಷ್ಟವಿರಲಿಲ್ಲವೆಂದು ತೋರಿಸುತ್ತದೆ.

ಮೂಲಭೂತವಾಗಿ ಇಲ್ಲಿ ಮತ್ತು ಬೇರೆ ಕಡೆಯೂ ಕರ್ತನು ಅವರಿಗೆ ಹೇಳುವುದೇನೆಂದರೆ ಅವರ ವಿಭಜನೆಯ ರಾಜನಿಷ್ಠೆಯನ್ನು ನಿಲ್ಲಿಸಿ ಆತನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಶಕ್ತಿಯಿಂದಲೂ, ಅವನನ್ನು ಸೇವಿಸಲು ಹೇಳುತ್ತಾನೆ. ಕರ್ತನು ಎಲ್ಲಾ ಸಮಯದಲ್ಲೂ ನಿಮ್ಮ ಪಾಪಗಳನ್ನು ಕ್ಷಮಿಸಿದ್ದನ್ನು ಆಲೋಚಿಸಿರಿ. ಆತನ ಕೃಪೆಯ ಬಗ್ಗೆ ಅದು ಏನು ಹೇಳುತ್ತದೆ?

**ಸೋಮವಾರ** **ಅಕ್ಟೋಬರ್ 25**

## ಪರದೇಶಿಯನ್ನು ಪ್ರೀತಿಸುವುದು

ಈ ಎಚ್ಚರಿಕೆಯ ಮಧ್ಯದಲ್ಲಿ ಮೋಶೆಯು ಹೀಗೆ ಪ್ರಕಟಿಸಿದ : "ಉನ್ನತೋನ್ನತವಾದ ಆಕಾಶಮಂಡಲವೂ ಮತ್ತು ಭೂಮಿಯೂ ಅದರಲ್ಲಿರುವ ಎಲ್ಲವೂ ನಿಮ್ಮ ದೇವರಾದ ಯೆಹೋವನವೇ" (ಧರ್ಮೋಪದೇಶಕಾಂಡ 10:14).

ಕರ್ತನ ಪರಮಾಧಿಕಾರವುಳ್ಳವನೆಂದು ಬಹಳ ಶಕ್ತಿಮಯವಾಗಿ ವ್ಯಕ್ತಪಡಿಸಿದೆ. ಇತರೆ ಕಡೆಯಲ್ಲೂ ಸತ್ಯವೇದದಲ್ಲಿ ಕಂಡುಬಂದಿದೆ. "ಭೂಮಿಯೂ ಅದರಲ್ಲಿರುವ ಸಮಸ್ತವೂ ಯೆಹೋವನದು. ಲೋಕವೂ ಅದರ ನಿವಾಸಿಗಳೂ ಆತನವೇ" (ಕೀರ್ತನೆ 24:1). ಧರ್ಮೋಪದೇಶಕಾಂಡ 10:17–19 ಅನ್ನು ಓದಿ.

ಕರ್ತನ ಬಗ್ಗೆ ಮತ್ತೆ ಯಾವ ಪ್ರಕಟಣೆಯನ್ನು ಮೋಶೆಯು ಮಾಡಿದ್ದಾನೆ? ಹೆಚ್ಚು ಪ್ರಾಮುಖ್ಯವಾಗಿ ದೇವರು ಯಾವ ಆಜ್ಞೆಯನ್ನು ತನ್ನ ಜನರಿಗೆ ಪ್ರಕಟಿಸಿದ್ದಾನೆ?

"ನಿಮ್ಮ ದೇವರಾದ ಯೆಹೋವನು ದೇವಾದಿದೇವನಾಗಿಯೂ, ಕರ್ತರ ಕರ್ತನಾಗಿಯೂ ಇದ್ದಾನೆ. ಆತನು ಪರಮ ದೇವರೂ ಪರಾಕ್ರಮಿಯೂ ಭಯಂಕರನೂ ಆಗಿದ್ದಾನೆ" (ಧರ್ಮೋಪದೇಶಕಾಂಡ 10:17).

ಅವರ ಸುತ್ತ ಇರುವ ಅನ್ಯರು ಆರಾಧಿಸುವ ಹಾಗೆ ಬೇರೆ ದೇವರುಗಳು ಅಥವಾ ಕೀಳಾದ ದೇವರುಗಳು ಇದ್ದಾರೆ ಎಂಬುದು ಅರ್ಥವಲ್ಲ. ಇದು ಬರಿ ಮಾತನಾಡುವ ವಿಧಾನ ಮಾತ್ರ. ಆತನೊಬ್ಬನೇ ದೇವರು. "ನಾನೇ ನಾನೊಬ್ಬನೇ ದೇವರಾಗಿರಲಾಗಿ ನನ್ನ ವಿನಾಃ ಯಾವ ದೇವರೂ ಇಲ್ಲವೆಂದು ಈಗಲಾದರೂ ತಿಳಿದುಕೊಳ್ಳಿರಿ" (ಧರ್ಮೋಪದೇಶಕಾಂಡ 32:39). ಇಹದಲ್ಲಾಗಲಿ ಪರದಲ್ಲಾಗಲಿ, ಇದು ಎಲ್ಲಾ ಶಕ್ತಿಗಳಿಗಿಂತ ಸಾರ್ವಭೌಮ್ಯತೆಯನ್ನು ತೋರಿಸುತ್ತದೆ.

ಈ ವಚನವು ಹೇಳುವುದೇನೆಂದರೆ "ಆತನು ಪರಮದೇವರು ಪರಾಕ್ರಮಿಯೂ, ಭಯಂಕರನೂ ಆಗಿದ್ದಾನೆ, ಆತನು ದಾಕ್ಷಿಣ್ಯ ನೋಡುವವನಲ್ಲ. ಲಂಚ ತೆಗೆದುಕೊಳ್ಳುವವನಲ್ಲ".

ಇದು ದೊಡ್ಡ ಸಂದೇಶದ ಒಂದು ಭಾಗ ಮಾತ್ರ. ಯೆಹೋವ ನಾನು ನಿಮ್ಮ ದೇವರು ನೀವು ಮತ್ತು ನಿಮ್ಮ ಜನರು ಆತನಿಗೆ ವಿಧೇಯರಗಬೇಕು. ಎಂಥ ಶಕ್ತಿಮಯವಾದ ರೀತಿ ಇಲ್ಲಿ ಪ್ರದರ್ಶಿಸಲ್ಪಟ್ಟಿದೆ. ಯೆಹೋವನು ದೇವಾದಿ ದೇವರು ಮತ್ತು ಕರ್ತರ ಕರ್ತನು. ಸಾರ್ವಭೌಮ್ಯ ರಾಜನು ಮತ್ತು ಸರ್ವಸೃಷ್ಟಿಯನ್ನು ಪಾಲಿಸುವವನು (ಕೊಲೆಸ್ಸೆ 1:16,17). ಆದಾಗ್ಯೂ ಆತನು ತಂದೆ ಇಲ್ಲದವರನ್ನು ವಿಧವೆಯರನ್ನು ಮತ್ತು ಪರದೇಶದವರನ್ನು ಕಾಪಾಡುವವನು. ಅವರ ಅಗತ್ಯವನ್ನು ಪೂರೈಸುವವನು. ದೇವರು ಒಂದು ಸಣ್ಣ ಗುಬ್ಬಿ ಕೆಳಗೆ ಬೀಳುವುದನ್ನು ಗಮನಿಸುವವನು

(ಮತ್ತಾಯ 10:29). ಸಮಾಜದಲ್ಲಿರುವ ಎಲ್ಲರ ದುರವಸ್ಥೆಯನ್ನು ಬಲ್ಲನು. ಬೇರೆ ಪದಗಳಲ್ಲಿ ಕರ್ತನು ತನ್ನ ಜನರಿಗೆ ಹೇಳುತ್ತಾನೆ. ಬಹುಶಃ ನೀವು ಆರಿಸಲ್ಪಟ್ಟ ಜನಾಂಗವಾಗಿದ್ದಾಗ್ಯೂ ವಿಶೇಷವಾದವರಾಗಿದ್ದಾಗ್ಯೂ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ಆದರೆ ಬೇರೆಯವರನ್ನು (ಇತರರನ್ನು) ಸಹ ಪ್ರೀತಿಸುತ್ತೇನೆ. ನಿಮ್ಮಲ್ಲಿ ಇರುವ ಕೊರತೆ ಉಳ್ಳವರನ್ನು ಅಸಹಾಯಕರನ್ನು ಪ್ರೀತಿಸುತ್ತೇನೆ. ನಾನು ಅವರನ್ನು ಹೇಗೆ ಪ್ರೀತಿಸುತ್ತೇನೋ ಹಾಗೆ ನೀವು ಅವರನ್ನು ಪ್ರೀತಿಸಬೇಕು. ಇದು ನಿಮ್ಮ ಮುಖ್ಯವಾದ ಒಡಂಬಡಿಕೆಯ ಕರಾರು. ಅದು ಬಹಳ ಪ್ರಾಮುಖ್ಯವಾದದ್ದು. ಕೀರ್ತನೆ 146:5–10 ಓದಿ. ಈ ಕೀರ್ತನೆಯಲ್ಲಿ ಯಾವ ಸಂದೇಶವನ್ನು ಪ್ರತಿಬಿಂಬಿಸುತ್ತದೆ. ದೇವರು ಇಲ್ಲಿ ಏನನ್ನು ಹೇಳುತ್ತಾರೆ. ಮತ್ತೆ ಇಂದು ಕ್ರೈಸ್ತರಾದ ನಮಗೆ ಯಾವ ಅರ್ಥವನ್ನು ಕೊಡುತ್ತದೆ?

**ಮಂಗಳವಾರ** **ಅಕ್ಟೋಬರ್ 26**

## ನೀವು ಐಗುಪ್ತದೇಶದಲ್ಲಿ ಪರದೇಶಿಗಳಾಗಿದ್ದಿರಿ

ಐಗುಪ್ತದೇಶದಲ್ಲಿ ನೀವೇ ಪರದೇಶಿಗಳಾಗಿದ್ದನ್ನು ಜ್ಞಾಪಿಸಿಕೊಂಡು ಪರದೇಶದವರಲ್ಲಿ ಪ್ರೀತಿ ಇಡಿರಿ (ಧರ್ಮೋಪದೇಶಕಾಂಡ 10:19). ಪುರಾತನ ಇಸ್ರಾಯೇಲ್ಯರಿಗೆ ಇಲ್ಲಿ ಯಾವ ಸಂದೇಶವಿದೆ? ಈ ವಾಕ್ಯದಿಂದ ನಮಗೂ ಯಾವ ಸಂದೇಶವಿದೆ?

ಶತಮಾನಗಳ ಪೂರ್ವದಲ್ಲಿ ಕರ್ತನು ಅಬ್ರಾಹಾಮನಿಗೆ ಹೇಳಿದನು: "ಆಗ ಯೆಹೋವನು ಅವನಿಗೆ– ನೀನು ಚೆನ್ನಾಗಿ ತಿಳಿಯತಕ್ಕದ್ದೇನೆಂದರೆ– ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲ ವಾಸವಾಗಿದ್ದು ಆ ದೇಶದವರಿಗೆ, ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. (ಆದಿಕಾಂಡ 15:13, ಆದಿಕಾಂಡ 17:8) ಮತ್ತು ಅಪೋಸ್ತಲರ ಕೃತ್ಯಗಳು 13:17 ಅನ್ನು ನೋಡಿ. ಇದು ಖಂಡಿತವಾಗಿಯೂ ವಿಮೋಚನಕಾಂಡದ ಪೂರ್ವ ಅಧ್ಯಯನಗಳಲ್ಲಿ ಅವರ ವಿಮೋಚನೆಯ ಕಥೆ (ವಿಮೋಚನಕಾಂಡ 15:13) ಮತ್ತು ರಕ್ಷಣೆ (ವಿಮೋಚನಕಾಂಡ 14:13). ಅವರು ಐಗುಪ್ತದೇಶದಿಂದ ಬಿಡುಗಡೆಯಾದುದನ್ನು ಮುಂದಿನ ಪೀಳಿಗೆಗಳಿಗೆ ವಿಮೋಚನೆಯ ಮತ್ತು ರಕ್ಷಣೆಯ ಸಂಕೇತವಾಗಿ ಯೇಸುಕ್ರಿಸ್ತನಿಂದ ಕೊಡಲ್ಪಡುತ್ತದೆ ಎಂಬುದಕ್ಕೆ ದಾಖಲಾಗಿದೆ. ಈ

ವಚನದಲ್ಲಿ ಅವರು ಎಲ್ಲಿದ್ದರು ಮತ್ತು ಏನಾಗಿದ್ದರು ಮತ್ತು ಪರದೇಶಗಳಾಗಿದ್ದನ್ನು ನೆನಪಿಗೆ ತಂದುಕೊಳ್ಳಬೇಕಿತ್ತು.

ಬೇರೆ ಪದದಲ್ಲಿ ಹೇಳಬೇಕಾದರೆ, ನೀವು ಬೇರೆ ದೇಶದಲ್ಲಿ ನೀವು ಬಹಿಷ್ಕೃತರು ಮತ್ತು ಗುಲಾಮರಾಗಿದ್ದನ್ನು, ನೆನಪಿಗೆ ತಂದು ನಿಮಗಿಂತಲೂ ಬಲಿಷ್ಠರ ಕೃಪೆಗೆ ಪಾತ್ರರಾಗಿದ್ದನ್ನು ನಿಮ್ಮನ್ನು ದುರುಪಯೋಗ ಮಾಡಿದರು. ಇಸ್ರಾಯೇಲ್ಯರು ದೇವರಿಂದ ಆರಿಸಿದ ರಾಜ್ಯವಾದರೂ, ದೇವರಿಂದ ಕರೆಯಲ್ಪಟ್ಟರಾದರು "ಯಾಜಕರಾಜ್ಯವು" (ವಿಮೋಚನಕಾಂಡ 19:6). ಅವರ ಮತ್ತು ಪರದೇಶದವರ ನಡುವೆ ಕೆಲವು ವ್ಯತ್ಯಾಸಗಳು ಇದ್ದರು. ವಿಶೇಷವಾಗಿ ಅವರ ಧಾರ್ಮಿಕ ಸೇವೆಯನ್ನು ಕುರಿತು ಹಾಗು "ಮಾನವ ಹಕ್ಕುಗಳು". ಇಸ್ರಾಯೇಲ್ಯರು ಬಯಸಿದ ಹಾಗೆ ನ್ಯಾಯ ಮತ್ತು ನಿಷ್ಪಕ್ಷವಾದ ರೀತಿಯಲ್ಲಿ ಪರದೇಶದವರನ್ನು ವಿಧವೆಯರನ್ನು, ಅನಾಥರನ್ನು ಅದೇ ರೀತಿ ನಡಿಸಿಕೊಳ್ಳತಕ್ಕದ್ದು.

ಮತ್ತಾಯ 7:12ಅನ್ನು ಓದಿ. ಈ ವಚನವು ಪುರಾತನ ಇಸ್ರಾಯೇಲ್ಯರಿಗೆ ಕರ್ತನು ಹೇಳುವುದೇನು? ಮತ್ತು ಅವರು ಅವರಿಗಿಂತ ಬಲಹೀನರನ್ನು ಹೇಗೆ ನಡಿಸಿಕೊಳ್ಳಬೇಕು?

ಇಸ್ರಾಯೇಲ್ಯರಿಗೆ ಕೊಟ್ಟ ಬುದ್ಧಿ ಮಾತುಗಳು ಹೇಗೆ ಅವರು ಅನ್ಯದೇಶದವರನ್ನು ನಡಿಸಿಕೊಳ್ಳಬೇಕು ಎಂಬುವುದು ಪುರಾತನ ಜಗತ್ತಿನಲ್ಲಿ ಅದು ನಿಯಮವಾಗಿರಲಿಲ್ಲ. ಆ ಪ್ರಯುಕ್ತವಾಗಿ ಜಾತಿ ಬಹಿಷ್ಕೃತರನ್ನು ಪ್ರಾಣಿಗಿಂತಲೂ ಕೀಳಾಗಿ ನಡಿಸಿಕೊಳ್ಳುತ್ತಿದ್ದರು.

ಇಸ್ರಾಯೇಲ್ಯರು ವ್ಯತ್ಯಾಸವುಳ್ಳವರಾಗಿ ಬೇರೆ ರಾಜ್ಯಗಳಿಗೆ ಅವರು ಬೆಳಕಾಗಬೇಕಿತ್ತು. ಅವರು ಆರಾಧಿಸುವ ದೇವರಲ್ಲಿಯೂ ಕಾಣಬೇಕಿತ್ತು. ದೇವರು ಅವರಿಗೆ ಕೊಟ್ಟಿರುವ ಧಾರ್ಮಿಕ ಪದ್ಧತಿಯ ಸತ್ಯವು ಅವರು ಹೇಗೆ ಆರಾಧಿಸುತ್ತಾರೆ. ಅದರಿಂದ ತಿಳಿದು ಬರುತ್ತಿತ್ತು.

ಅವರ ದಯಾಮಯವಾದ ವರ್ತನೆಯು ಲೋಕಕ್ಕೆ ಒಂದು ಬಲಮಯವಾದ ಸಾಕ್ಷಿಯಾಗಿ, ಅವರ ದೇವರ ಶ್ರೇಷ್ಠತೆ ಮತ್ತು ನಂಬಿಕೆಯನ್ನು ತೋರಿಸುವಂತದ್ದಾಗಿತ್ತು. ಅದಕ್ಕಾಗಿಯೇ ಅವರು ಅಸ್ತಿತ್ವದಲ್ಲಿ ಇದ್ದು ಲೋಕಕ್ಕೆ ದೇವರ ಸಾಕ್ಷಿಯಾಗಬೇಕಿತ್ತು.

**ಬುಧವಾರ** **ಅಕ್ಟೋಬರ್ 27**

# ನ್ಯಾಯಯುತವಾಗಿ ತೀರ್ಪು ಕೊಡು

ನಾವು ವಿಶ್ವಾಸಿಗಳಾಗಿ, ದೇವರ ಸ್ವಭಾವವನ್ನು ಪ್ರತಿಬಿಂಬಿಸಲು ನಮ್ಮನ್ನು ಕರೆದಿದ್ದಾನೆ. ಪೌಲನು ಹೀಗೆ ಬರೆದಿದ್ದಾನೆ– "ನನ್ನ ಪ್ರಿಯವಾದ ಮಕ್ಕಳೇ, ಕ್ರಿಸ್ತನ ಸ್ವರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಿಮಗೋಸ್ಕರ ತಿರುಗಿ ಪ್ರಸವ ವೇದನೆ ಪಡುತ್ತೇನೆ" (ಗಲಾತ್ಯ 4:19). ಹೇಗೂ ನಮ್ಮನ್ನು ಹುಟ್ಟಿನಿಂದಲೇ "ದೇವರ ಸ್ವರೂಪದಲ್ಲಿ" ಮಾಡಿದ್ದಾನೆ (ಆದಿಕಾಂಡ 1:27). ಆ ಸ್ವರೂಪವು ಪಾಪದಿಂದ ವಿರೂಪವಾಯಿತು. ನಾವು ನೋಡಿದಾಗೆ ಮೋಶೆಯು ದೇವರ ಶಕ್ತಿ ಮತ್ತು ಸಾರ್ವಭೌಮತ್ವವನ್ನು ಕುರಿತು ಮಾತನಾಡುವಾಗ ಆತನು ಹೇಳಿದ ದೇವರು ಬಲಹೀನರನ್ನು ಮತ್ತು ಬಹಿಷ್ಕೃತರನ್ನು ರಕ್ಷಿಸಲು ಲಂಚ ತೆಗೆದುಕೊಳ್ಳುವುದಿಲ್ಲ. ದೇವರು ಈ ರೀತಿ ಮಾಡಿದರೆ ನಾವೂ ಸಹ ಹಾಗೆ ಮಾಡತಕ್ಕದ್ದು.

ಈ ಕೆಳಕಂಡ ವಾಕ್ಯಗಳನ್ನು ಧರ್ಮೋಪದೇಶಕಾಂಡ ಪುಸ್ತಕದಲ್ಲಿ ಓದಿ ಈ ಎಲ್ಲಾ ವಚನಗಳಲ್ಲಿ ಕಂಡುಬರುವ ಸರ್ವಸಾಮಾನ್ಯವಾದ ವಿಷಯ ಯಾವುದು?

ಧರ್ಮೋಪದೇಶಕಾಂಡ 1:16........................

ಧರ್ಮೋಪದೇಶಕಾಂಡ 16:19........................

ಧರ್ಮೋಪದೇಶಕಾಂಡ 24:17........................

ಧರ್ಮೋಪದೇಶಕಾಂಡ 27:19........................

ಬಹುತೇಕ ಮಾನವರ ನ್ಯಾಯಾಲಯದಲ್ಲಿ ಬಲಹೀನರಿಗೆ, ಬಡವರಿಗೆ ಮತ್ತು ಬಹಿಷ್ಕೃತರಿಗೆ ಒಂದೇ ತರಹದ ನ್ಯಾಯವು ಹಣ ಬಲ ಮತ್ತು ಸಂಬಂಧ ಉಳ್ಳವರಿಗೆ ಸಿಗುವ ಹಾಗೆ ಇವರಿಗೆ ಸಿಗುವುದಿಲ್ಲ. ಇದು ಲೋಕ ಪ್ರಸಿದ್ಧವಾದ ಗಾಥೆಯಾಗಿದೆ. ಯಾವುದೇ ದೇಶ, ಕಾಲ, ಸಂಸ್ಕೃತಿ ಇದ್ದಾಗ್ಯೂ ಅಥವಾ ಸಂವಿಧಾನದಲ್ಲಿ ಎಷ್ಟೇ ಉನ್ನತವಾದ ನ್ಯಾಯವಾದ ತತ್ವಗಳು ಅಥವಾ ಶಾಸನಗಳು ಇದ್ದರೂ ವಾಸ್ತವ ಒಂದೇ ಉಳಿದಿದೆ. ಬಡವರು, ಬಲಹೀನರು ಮತ್ತು ಬಹಿಷ್ಕೃತರಿಗೆ ಬಹುತೇಕ ನ್ಯಾಯ ಸಿಗುವುದಿಲ್ಲ.

ಕರ್ತನು ತಾನೇ ಹೇಳುವ ವಿಷಯ ಅಪೂರ್ವವಾದದ್ದು. ಇಂಥಾ ಅನ್ಯಾಯವು

ಎಲ್ಲಾ ಕಡೆ ಇದೆ. ಆದರೆ ಲೋಕಕ್ಕೆ ಪ್ರತಿನಿಧಿಗಳಾಗಿರುವ ಇಸ್ರಾಯೇಲ್ಯರು ದೇವರ ಜನರಲ್ಲಿ ಇದು ಇರಕೂಡದು.

ಒಂದು ಅರ್ಥದಲ್ಲಿ ಆಧುನಿಕ ಕಾಲದಲ್ಲಿಯೂ ಸಹ ಕರ್ತನಿಗೆ ಬೇಕಾದದ್ದು "ಸಮಾನತೆ, ನ್ಯಾಯಾಲಯದಲ್ಲಿ" ನ್ಯಾಯವಾದ ತೀರ್ಪು ಪುರಾತನ ಇಸ್ರಾಯೇಲ್ಯರಲ್ಲಿ ಇರಲು ಬಯಸಿದ.

ಆದರೆ ಧರ್ಮಶಾಸ್ತ್ರದಲ್ಲಿ ಇರುವುದಕ್ಕಿಂತ ಆಳವಾಗಿ ಹೋಗುತ್ತದೆ "ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನಾಗಿರುವುದರಿಂದ ನೀವು ಪರಿಶುದ್ಧರಾಗಿರಬೇಕು" (ಯಾಜಕಕಾಂಡ 19:2). ಹೌದು ನಿಜವಾದ ದೇವರು ಯಾರೆಂಬುದು ಅವರಿಗೆ ಗೊತ್ತು, ಅವರಲ್ಲಿ ಸರಿಯಾದ ಆರಾಧನೆ ಕ್ರಮ ಇತ್ತು ಹಾಗೂ ಅವರು ಸರಿಯಾದ ಕಾಣಿಕೆಗಳನ್ನು ತರುತ್ತಿದ್ದರು. ಇದು ಎಲ್ಲಾ ಸರಿ, ಆದರೆ ಅಂತ್ಯದಲ್ಲಿ ಅವರು ಬಲಹೀನರನ್ನು ಅವರ ಜೊತೆಯಲ್ಲಿರುವ ಬಡವರನ್ನು ಕೆಟ್ಟ ರೀತಿಯಲ್ಲಿ ನಡಿಸಿಕೊಂಡರೆ ಯಾವ ರೀತಿ ಒಳ್ಳೆದಾಯಿತು?

ಪದೇ ಪದೇ ಪ್ರವಾದಿಗಳ ಮೂಲಕ ಕರ್ತನು ಅವರು ಬಡವರನ್ನು ಮತ್ತು ಬಲಹೀನರನ್ನು ಹಿಂಸಿಸುವಾಗ ಇಸ್ರಾಯೇಲ್ಯರಿಗೆ ಎಚ್ಚರಿಕೆ ನೀಡಿದನು.

ನೀವು ಪರಿಶುದ್ಧರಾಗಿದ್ದು ಅದೇ ಸಮಯದಲ್ಲಿ ಹೇಗೆ ಬಡವರನ್ನು ಹಿಂಸಿಸಲು ಸಾಧ್ಯ? ನೀವು ಎಷ್ಟೇ ಕಟ್ಟುನಿಟ್ಟಾಗಿ ಧರ್ಮವನ್ನು ಆಚರಿಸಿದರೂ ಇದನ್ನು ಮಾಡಲು ಸಾಧ್ಯ ಇಲ್ಲ.

ಆಮೋಸ 2:6, ಆಮೋಸ 4:1, ಆಮೋಸ 5:11, ಯೆಶಾಯ 3:14,15, ಯೆಶಾಯ 10:12 ಮತ್ತು ಯೆರೆಮೀಯನು 2:34 ಅನ್ನು ಓದಿ. ಕರ್ತನು ಇಸ್ರಾಯೇಲ್ಯರಿಗೆ ನೀಡಿದ ಎಚ್ಚರಿಕೆ ಏನು? ಪ್ರವಾದಿಗಳು ಹೇಳುವುದೇನು? ಈ ವಚನಗಳು ಇಂದು ನಮಗೆ ಹೇಳುವುದೇನು?

**ಗುರುವಾರ** **ಅಕ್ಟೋಬರ್ 28**

## ದೇವರ ಮುಂದೆ ಪರಿಶುದ್ಧವಾದ ಧರ್ಮ

ನಮ್ಮ ನಿಯಂತ್ರಣದಲ್ಲಿ ಇರುವವರನ್ನು ಹೇಗೆ ನಡಿಸಿಕೊಳ್ಳತಕ್ಕ ವಿಷಯದಲ್ಲಿ ಯಾವ ವಿಧವಾದ ಮುಖ್ಯವಾದ ತತ್ವಗಳನ್ನು ಇಲ್ಲಿ ವ್ಯಕ್ತವಾಗಿದೆ?

ಮಾನವರ ಘನತೆ ಬಗ್ಗೆ ಕರ್ತನು ಮತ್ತೆ ಆ ಶಕ್ತಿಯನ್ನು ವ್ಯಕ್ತ ಮಾಡುವುದನ್ನು ಕಾಣುತ್ತೇವೆ. ಹೌದು ಯಾರೋ ನಿಮಗೆ ಏನನ್ನೋ ಕೊಡಬೇಕಿತ್ತು. ಅದನ್ನು ಒಟ್ಟು ಕೂಡಿಸುವ ಸಮಯ ಬಂದಾಗ್ಯೂ ಆ ಮನುಷ್ಯನಿಗೆ ಸ್ವಲ್ಪ ಗೌರವ ತೋರಿಸತಕ್ಕದ್ದು. ಅವನ ಸ್ಥಳಕ್ಕೆ ಓಡಿಹೋಗಿ ಅದನ್ನು ಕೊಡಲು ಒತ್ತಾಯ ಮಾಡಬಾರದು. ಹಾಗೆ ಮಾಡದೆ ಅವನು ಮನೆಯಿಂದ ಹೊರಗೆ ಬಂದು ಕೊಡುವ ತನಕ ಕಾಯಬೇಕು. ಧರ್ಮೋಪದೇಶಕಾಂಡ 24:12,13ರಲ್ಲಿ ಹೇಳುವುದೇನೆಂದರೆ ಯಾವನೋ ಒಬ್ಬ ಬಡವನು ತನ್ನ ಕಂಬಳಿಯನ್ನು "ಒತ್ತೆಯಾಗಿ" ಇಟ್ಟಿದ್ದರೆ, ಅವನಿಗೆ ಮಲಗಲು ಹಿಂದಕ್ಕೆ ಕೊಡತಕ್ಕದ್ದು. ಇತರ ವಚನಗಳಲ್ಲಿ ನಾವು ಹೇಗೆ ಬಡ ಕೂಲಿ ಆಳುಗಳನ್ನು ವರ್ತಿಸಬೇಕೆಂದು ತಿಳಿಸುವಂತಾಗಿದೆ. ಅವನಿಗೆ ಅನ್ಯಾಯ ಮಾಡಬಾರದು. ದೇವರ ದೃಷ್ಟಿಯಲ್ಲಿ ಅದು ಪಾಪ ಮಾತ್ರವಾಗದೆ ಅದು ಘೋರ ಪಾಪವಾಗುತ್ತೆ. ಮತ್ತೆ ಇಸ್ರಾಯೇಲ್ಯರು ಸಾಕ್ಷಿಗಳಾಗಿ ಪರಿಶುದ್ಧ ಜನರಾಗಿ ಪಾಪ ತುಂಬಿದ ಲೋಕದೊಳಗೆ ಅವರು ಸತ್ಯದಲ್ಲಿ ನಡೆಯುವವರಾಗಿ ತಪ್ಪು, ವಿಗ್ರಹ ಆರಾಧನೆ, ಅಂಥವರಿಗೆ ಬಲಹೀನರಿಗೆ ಅವರು ಕರುಣಾಮಯ–ವಾಗಿರಬೇಕು. ಇಲ್ಲದಿದ್ದರೆ ಅವರ ಸಾಕ್ಷಿಯು ವ್ಯರ್ಥವಾಗುತ್ತದೆ.

ಯಾಕೋಬನು 1:27–2:11 ಅನ್ನು ಓದಿ. ಧರ್ಮೋಪದೇಶಕಾಂಡದಲ್ಲಿ ತನ್ನ ಜನರಿಗೆ ಹೇಳುವ ಯಾವ ವಿಷಯವು ಯಾಕೋಬನು ಇಲ್ಲಿ ಹೇಳುತ್ತಿದ್ದಾನೆ? ಈ ವಚನಗಳಲ್ಲಿ ಯಾವ ಪ್ರಾಮುಖ್ಯತೆಯನ್ನು ಯಾಕೋಬನು ಬಡಜನರನ್ನು ಕೆಟ್ಟ ರೀತಿ ನಡಿಸಿಕೊಳ್ಳುವುದಕ್ಕೆ ದಶ ಆಜ್ಞೆಗಳನ್ನು ಜೋಡಿಸುತ್ತಾನೆ?

ಶ್ರೀಮಂತರಿಗೂ ಬಡವರಿಗೂ ಪಕ್ಷಪಾತವನ್ನು ತೋರಿಸುವ ಹಾಗೆ ನೇರವಾಗಿ ದಶಾಜ್ಞೆಗಳಲ್ಲಿ ಇಲ್ಲದಿದ್ದಾಗ್ಯೂ ಅದೇ ಸಮಯದಲ್ಲಿ ಬಡವರನ್ನು ದಿಕ್ಕಿಲ್ಲದವರನ್ನು ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುವುದನ್ನು ನಿಯಮದ ಪತ್ರಕ್ಕೆ ಕಟ್ಟುನಿಟ್ಟಾಗಿ ಬದ್ಧರಾಗಿದ್ದರೆ ಅವರು ದೇವರ ಆಜ್ಞೆಗಳನ್ನು ಇಟ್ಟುಕೊಳ್ಳುತ್ತೇವೆಂದು ಹೇಳಿದ್ದಾಗ್ಯೂ ಅದು ಅವರ ನಂಬಿಕೆಗೆ ಅಪಹಾಸ್ಯ ಮಾಡಿದಂತಾಗುತ್ತದೆ. ದೇವರ ಆಜ್ಞೆಯ ಮುಖ್ಯಭಾವವು ನಿನ್ನ ನೆರೆಯವನನ್ನು ನಿನ್ನಂತೆ ಪ್ರೀತಿಸತಕ್ಕದ್ದು. ಯಾಕೋಬನ ಕಾಲದಲ್ಲಿ ಇದ್ದ ಹಾಗೆ ಇಂದು ಅದು ವರ್ತಮಾನ ಸತ್ಯವಾಗಿದೆ ಮತ್ತು ಮೋಶೆಯು ಇಸ್ರಾಯೇಲ್ ಜನರಿಗೆ ಆ ಪವಿತ್ರಭೂಮಿಯ ಅಂಚಿನಲ್ಲಿ ಹೇಳಿದ ಮಾತಿದು.

ಯಾಕೋಬ ಮತ್ತು ಧರ್ಮೋಪದೇಶಕಾಂಡದಲ್ಲಿ ಕಂಡುಬರುವ ವಾಕ್ಯಗಳನ್ನು ಕುರಿತು ಸೆವೆಂತ್ ಡೇ ಅಡ್ವೆಂಟಿಸ್ಟರಾದ ನಾವು ದೇವರ ಆಜ್ಞೆಗಳನ್ನು ಯಾಕೆ ಈ ವಾಕ್ಯಗಳನ್ನು ಗಂಭೀರವಾಗಿ ಪರಿಗಣಿಸುತ್ತಾರೆ?

ಯಾಕೋಬನ ಪುಸ್ತಕದಲ್ಲಿ ಕೊಟ್ಟಿರುವುದನ್ನು ಓದುವ ಹಾಗೆ ಆಜ್ಞೆಗಳನ್ನು ಇಟ್ಟುಕೊಳ್ಳುವುದರಿಂದ ನಮ್ಮ ಮಧ್ಯೆ ಇರುವ ಬಡವರಿಗೂ ದಿಕ್ಕಿಲ್ಲದವರಿಗೂ ಸಹಾಯ ಮಾಡುವ ಮನಸ್ಸನ್ನು ಬಲಪಡಿಸಲು ಯಾಕೆ ಆಜ್ಞೆಗಳನ್ನು ಇಟ್ಟುಕೊಳ್ಳಬೇಕು?

**ಶುಕ್ರವಾರ** **ಅಕ್ಟೋಬರ್ 29**

**ಹೆಚ್ಚಿನ ಆಲೋಚನೆ :** ಇಸ್ರಾಯೇಲ್ ರಾಜ್ಯವು ದಾವೀದ ಮತ್ತು ಸಾಲೋಮನ ನಂತರ ಅಡಿಯಲ್ಲಿ ಶ್ರೇಷ್ಠ ಸಮಯದಲ್ಲಿದ್ದಾಗ್ಯೂ ಅವರು ದೇವರಿಂದ ಆಶೀರ್ವದಿಸಲ್ಪಟ್ಟವರಾಗಿದ್ದಾಗ್ಯೂ ಅವರು ಬಡವರನ್ನು ಅಸಹಾಯಕರನ್ನು ಪರದೇಶಿಗಳನ್ನು ಅವರ ಮಧ್ಯದಲ್ಲಿದ್ದ ಗತಿಹೀನರನ್ನು ಹಿಂಸಿಸುವುದನ್ನು ನಾನು ಊಹಿಸುವುದು ಬಹಳ ಕಷ್ಟಕರವಾಗಿದೆ. ನೀವು ಬಡವರನ್ನು ತುಳಿದು ಅವರಿಂದ ಗೋಧಿಯನ್ನು ಬಿಟ್ಟಿ ತೆಗೆದುಕೊಂಡ ಕಾರಣ ಕೆತ್ತಿದ ಕಲ್ಲಿನಿಂದ ನೀವು ಕಟ್ಟಿಕೊಂಡ ಮನೆಗಳಲ್ಲಿ ವಾಸಿಸದೆ ಇರುವಿರಿ. ಮಾಡಿಕೊಂಡ ಒಳ್ಳೆ ಒಳ್ಳೆ ತೋಟಗಳ ದ್ರಾಕ್ಷಾರಸವನ್ನು ಕುಡಿಯೊಲ್ಲ, ಶಿಷ್ಟ ಹಿಂಸಕರೆ ಲಂಚಕೋರರೆ ದರಿದ್ರ ನ್ಯಾಯವನ್ನು ತಪ್ಪಿಸುವವರೇ ನಿಮ್ಮ ದ್ರೋಹಗಳು ಬಹಳ ನಿಮ್ಮ ಪಾಪಗಳು ಪ್ರಬಲ ಎಂದು ಗೊತ್ತಿದೆ (ಆಮೋಸ 5:11,12).

ಯೆಹೋವನು ತನ್ನ ಜನರ ಹಿರಿಯರನ್ನು ಅಧಿಕಾರಗಳನ್ನು ನ್ಯಾಯ ವಿಚಾರಣೆಗೆ ತರುವನು. ನೀವು ದ್ರಾಕ್ಷಿಯ ತೋಟವನ್ನು ನುಂಗಿ ಬಿಟ್ಟಿದ್ದೀರಿ. ಬಡವರಿಂದ ಕೊಳ್ಳೆ ಹೊಡೆದದ್ದು ನಿಮ್ಮ ಮನೆಗಳಲ್ಲೇ ಇದೆ (ಯೆಶಾಯ 3:14).